ಅ) ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಬೇಕಾಗಿದ್ದಲ್ಲಿ ಅದಕ್ಕೆ ಅಗತ್ಯವುಳ್ಳ ಸಿಬ್ಬಂದಿ, ವಾಹನ ಮತ್ತು ಉಪಕರಣಗಳ ಹಾಗೂ ಠಾಣೆಗೆ ಸೂಕ್ತವಾದ ಭೂಮಿ ಮತ್ತು ಕಟ್ಟಡ ಇವೆಲ್ಲವುಗಳನ್ನು ಒದಗಿಸಿದ ನಂತರ ಠಾಣೆಯನ್ನು ಪ್ರಾರಂಭಿಸಲು ಸಾಧ್ಯವಾಗುವುದು.

ಆ) ಮೇಲೆ (ಅ) ನಲ್ಲಿನ ಉತ್ತರವು ಇದಕ್ಕೂ ಅನ್ವಯಿಸುತ್ತದೆ.

ಈ) ಸದರಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಬೇಕಾಗುವ ಸಿಬ್ಬಂದಿ, ವಾಹನ, ಉಪಕರಣಗಳು, ಭೂಮಿ ಮತ್ತು ಕಟ್ಟಡ ಇವುಗಳನ್ನು ಒದಗಿಸುವ ಬಗ್ಗೆ ಸಂಪನ್ಮೂಲಗಳನ್ನು ಆಧರಿಸಿ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು ಕಾರಾಗೃಹದಲ್ಲಿ ಮಾದಕವಸ್ತು ಮಾರಾಟ

397 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಾರಾಗೃಹ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನ ಸೆಂಟ್ರಲ್ ಜೈಲ್‌ನ ಒಳಗೆ ಮಾದಕ ವಸ್ತುವಿನ ಮಾರಾಟದ ಪ್ರಕರಣ ಪತ್ತೆಯಾಗಿರುವುದು ನಿಜವೇ?

ಆ) ಇದುವರೆವಿಗೆ ಈ ವಿಷಯದಲ್ಲಿ ಜೈಲಿನ ಎಷ್ಟು ಸಿಬ್ಬಂದಿ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗಿದೆ?

ಇ) ಬಿಗಿ ಭದ್ರತೆಯನ್ನು ಹೊಂದಿದ್ದರೂ ಸಹ ಇಂತ ಪ್ರಕರಣ ಪತ್ತೆಯಾಗಿರುವುದರಲ್ಲಿ ಜೈಲಿನ ಹಿರಿಯ ಅಧಿಕಾರಿಗಳ ಕೈವಾಡ ಇರುವುದು ನಿಜವೇ?

ಈ) ಈ ಬಗ್ಗೆ ಸಮಗ್ರವಾದ ತನಿಖೆ ನಡೆಸಲಾಗುವುದೇ?

ಡಾ॥ ಆರ್.ಬಿ. ಚೌಧುರಿ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಒಬ್ಬ ವಿಚಾರಣಾ ಖೈದಿಯ ಬಳಿ ಒಂದು ಗ್ರಾಮ್ ಗಾಂಜಾ ಇರುವುದನ್ನು ಇತ್ತೀಚೆಗೆ ಪತ್ತೆ ಹಚ್ಚಲಾಗಿದೆ. ಅದನ್ನು ಬೇರೊಬ್ಬ ವಿಚಾರಣಾ ಖೈದಿಯಿಂದ 10 ರೂಪಾಯಿಗೆ ಕೊಂಡಿರುವುದಾಗಿ ತಿಳಿಸಿದ್ದಾನೆ.

ಆ) ಇಬ್ಬರು ಹೆಡ್‌ವಾರ್ಡರ್ ಮತ್ತು ಇಬ್ಬರು ಜೈಲರ್ ಅವರುಗಳನ್ನು ಇಲಾಖಾ ವಿಚಾರಣಾ ಕಾಯ್ದಿರಿಸಿ ಅಮಾನತ್ತಿನಲ್ಲಿಡಲಾಗಿದೆ ಮತ್ತು ಇಬ್ಬರು ಸಹಾಯಕ ಅಧೀಕ್ಷಕರನ್ನು ರಜೆಯ ಮೇಲೆ ಕಳುಹಿಸಲಾಗಿದೆ.

ಇ) ಇದರಲ್ಲಿ ಹಿರಿಯ ಅಧಿಕಾರಿಗಳ ಕೈವಾಡವಿಲ್ಲ.

ಈ) ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ.

ಭೂ ಸೇನಾ ನಿಗಮದ ಆರ್ಥಿಕತೆ ಸುಧಾರಣೆ.

656 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಆಹಾರ ಸಂಸ್ಕರಣ ಕೈಗಾರಿಕೆಗಳ ಮತ್ತು ಭೂ ಸೇನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂ ಸೇನಾ ನಿಗಮವು ಕಳೆದ 4 ವರ್ಷಗಳಲ್ಲಿ ಅನುಭವಿಸಿದ ಲಾಭ ಅಥವಾ ನಷ್ಟದ ಪ್ರಮಾಣವೆಷ್ಟು (ವರ್ಷವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಅವಧಿಯಲ್ಲಿ ಭೂಸೇನಾ ನಿಗಮವು ಎಷ್ಟು ಕೋಟಿ ರೂ.ಗಳ ಕಾಮಗಾರಿಯನ್ನು ತೆಗೆದುಕೊಂಡಿರುತ್ತದೆ.

ಇ) ಭೂ ಸೇನಾ ನಿಗಮದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು (ಹುದ್ದೆವಾರು ಅಂಕಿ ಅಂಶಗಳನ್ನು ಒದಗಿಸುವುದು)